ಶ್ರೀ ಬಿ. ರಾಚಯ್ಯ.—ಕಳೆದ ಸಾಲಿನಲ್ಲಿ ಕಕೂನುಗಳು ರೈತರಿಗೆ ಸರಿಯಾಗಿ ಸಿಕ್ಕದೆ ಅದರ ಬೆಲೆ ಕೂಡ ಕೆಲವು ಕಡೆ ಹೆಚ್ಚಿತು. ಅದರಿಂದ ರೈತರು ಎರಡು, ಎರಡೂವರೆ ತಿಂಗಳು ಕಾಯಬೇಕಾಗುತ್ತದೆ ಎಂದು ಒಂದು, ಒಂದೂವರೆ ತಿಂಗಳಲ್ಲೇ ಬೆಳೆ ಮಾಡಬೇಕೆಂದು ಎಳನು ಸೊಪ್ಪನ್ನು ಹುಳಗಳಿಗೆ ತಿನ್ನಿಸುವುದರಿಂದ ಕೆಲವು ಭಾಗದಲ್ಲಿ ಬೆಳೆ ಕೆಡಲು ಕಾರಣವಾಯಿತು. ಜಪಾನ್ ದೇಶದಲ್ಲೂ ಕೂಡ ಫ್ಲಾಟರಿ ಎಂಬ ರೋಗವು ಬೃಹದಾಕಾರವಾಗಿ ಹರಡಿದೆ. ಇನ್ನೂ ಹೆಚ್ಚಿನ ಪ್ರಯೋಗ ಮಾಡಿ ಅದರ ಬಗ್ಗೆ ಪರಿಶೋಧನೆ ನಡೆಸುತ್ತಿದ್ದಾರೆ. ಇದನ್ನು ನಾನು ಹೋಗಿ ನೋಡಿ ಬಂದಿದ್ದೇನೆ.

ಶ್ರೀ ಜಿ. ಎ. ಗೌಡ.—ಬಿತ್ತನೆ ಸರಿಯಾಗಿ ಆಗದೆ ಇರುವುದರಿಂದ ಬೆಲೆ ಏರಲು ಕಾರಣವಾಯಿತಲ್ಲವೇ?

ಶ್ರೀ ಬಿ. ರಾಚಯ್ಯ.—ಕಳೆದ ಸಾರಿ ಹಂಚಿಕೆಯಲ್ಲಿ ಸ್ವಲ್ಪ ತೊಂದರೆಯಾಗಿತ್ತು. ಈ ಸಾರಿ ಅದನ್ನೆಲ್ಲಾ ಸರಿಯಾಗಿ ಮಾಡಲು ಬೇಸಿಕ್ ಸೀಡು ಫಾರಂಗಳಲ್ಲಿ ಏರ್ಪಾಡು ಮಾಡುತ್ತಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನುಗ್ಗನಹಳ್ಳಿ ಕಡೆಯಿಂದ ಗೂಡನ್ನು ತಯಾರಿಸಿ ಬಿತ್ತನೆಯ ಬೀಜವನ್ನು ಕೊಡುತ್ತಿರುವುದರಿಂದ ಇಷ್ಟು ಕಷ್ಟವಾಗುತ್ತಿದೆಯಲ್ಲವೇ?

ಶ್ರೀ ಬಿ. ರಾಚಯ್ಯ.—ನುಗ್ಗನಹಳ್ಳಿ ಕಡೆಯ ರೈತರೇ ಈಗ ಬಂದು ನಮಗೆ ಬಿತ್ತನೆಯ ಗೂಡನ್ನು ತಯಾರಿಸಲು ಅವಕಾಶ ಮಾಡಿಕೊಡಬೇಕೆಂದು ಕೇಳಿದರು. ಅದರಂತೆ ಈಗ ಅವಕಾಶ ಮಾಡಿ ಕೊಟ್ಟಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಪೋಷಣೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದರಿಂದ ಇದರ ಬೆಲೆ ನೂರಕ್ಕೆ ಇಪ್ಪತ್ತು ರೂಪಾಯಿಗಳಷ್ಟು ಹೆಚ್ಚಾಗಲು ಕಾರಣವಾಯಿತಲ್ಲವೇ? ಇದು ನರ ಕಾರದ ಗಮನಕ್ಕೆ ಬಂದಿಲ್ಲವೇ?

ಶ್ರೀ ಬಿ. ರಾಚಯ್ಯ.—18 ರೂಪಾಯಿಗಳವರೆಗೆ ಬೆಲೆ ಏರಿತು ಎಂದು ತಿಳಿದು ಬಂದಿದೆ. ಈಗ ಅದನ್ನು ಕಡಿಮೆ ಮಾಡುವುದಕ್ಕೆ ಪಯತ್ನ ಮಾಡುತ್ತಿದ್ದೇವೆ.

Basis adopted to form Divisions in the M.S.R.T.C. in the State

*Q.—21. Sri S. P. PHAYADE (Ankola).—

Will the Government be pleased to state :—

(*a*) the basis adopted to form Divisions in the Mysore State Road Transport Corporation in the State ;

(*b*) the number of Divisions of Mysore State Road Transport Corporation working in Mysore State and the revenue in each Division for the past 3 years ;

(*c*) the revenue from North Kanara Division during the above period ;

(*d*) the details of the new routes proposed to be opened in the North Kanara District and the details of proposals pending ?

A.—Sri D. DEVARAJ URS (Minister for Labour, Housing and Transport).—

(*a*) Homogeneity of traffic flow, administrative convenience and control, proximity of the operating units to the Division Headquarters and the strength of operating fleet are the basis adopted.

(SRI D. DEVARAJ URS)

(*b*) At present there are Eight Divisions. The details of Traffic Revenues realised are as below :—

STATEMENT

	1960-61	1961-62	1962-63
	Rs.	Rs.	Rs.
(*a*) Bangalore ...	1,14,86,195	1,18,06,358	1,13,23,986
(*b*) B. T. S. ...	90,95,850	95,13,367	1,08,86,762
(*c*) Hassan ...	....	* 29,55,533	79,44,622
(*d*) Mysore ...	....	†5,20,870	70,73,937
(*e*) Belgaum ...	1,23,49,444	1,25,81,477	1,29,44,181
(*f*) Hubli ...	1,22,57,703	1,30,08,708	1,11,06,145
(*g*) Bijapur ...	91,81,954	95,48,284	1,04,28,000
(*h*) Gulbarga ...	63,59,712	73,43,129	79,07,722
Total ...	6,07,30,858	6,72,77,746	8,26,16,155

* for six months.

† for one month.

(*c*) There is no exclusive division for North Kanara.

(*d*) At present there are no proposals pending with the Corporation in this regard.

ಶ್ರೀ ಎಸ್. ಪಿ. ಘಾಯದೆ.—ಕಾರವಾರಕ್ಕಾಗಿ ಒಂದು ಡಿವಿಜನ್ನು ಮಾಡಲು ಸರಕಾರಕ್ಕೆ ಸಾದರೂ ಮನವಿಗಳು ಬಂದಿವೆಯೇ? ಇದರ ಬಗ್ಗೆ ವಿಚಾರ ಮಾಡುತ್ತಿದ್ದೀರಾ?

ಶ್ರೀ ಡಿ. ದೇವರಾಜ ಅರಸ್.—ನಾನು ಈಚೆಗೆ ಹುಬ್ಬಳ್ಳಿಗೆ ಹೋಗಿದ್ದಾಗ ಅಲ್ಲಿರುವ ಚೇಂಬರ್ ಆಫ್ ಕಾಮರ್ಸ್‌ನವರು ನನಗೆ ಒಂದು ರೆಪ್ರಸೆಂಟೇಷನ್ನು ಕೊಟ್ಟರು. ಅದರಲ್ಲಿ ಇದನ್ನೂ ಸೇರಿಸಿದ್ದಾರೆ.

ಶ್ರೀ ಸಿದ್ಧಯ್ಯ ಕಾಶೀಮಠ.—ಎಂಟು ಡಿವಿಜನ್ನುಗಳನ್ನು ಮಾಡಬೇಕೆಂದು ಇಲ್ಲಿ ಹೇಳಲಾಗಿದೆ. ಈ ರೀತಿಯಾಗಿ ಎಷ್ಟು ಡಿವಿಜನ್ನುಗಳನ್ನು ಮಾಡಬೇಕಾಗುತ್ತದೆ ಎನ್ನುವ ವಿಚಾರದಲ್ಲಿ ಏನಾದರೂ ಸರ್ವೆ ಮಾಡಿದ್ದೀರಾ?

ಶ್ರೀ ಡಿ. ದೇವರಾಜ ಅರಸ್.—ಸರ್ವೆ ಮಾಡಬೇಕಾಗುವುದಿಲ್ಲ. ನ್ಯಾಷನಲೈಸು ಮಾಡುವಾಗ ಇದರ ಅವಶ್ಯಕತೆ ಕಂಡು ಬರುತ್ತದೆ.

Sri SANJEEVANATH AIKALA.—What is the criterion for forming the Divisions? Does it depend on the number of buses or number of routes or mileage?

ಶ್ರೀ ಡಿ. ದೇವರಾಜ ಅರಸ್.—ಇದು ಸಂಚಾರದ ವ್ಯವಸ್ಥೆ ಆಡಳಿತದ ಅನುಕೂಲತೆಗಳು ಹೋಪೋಜಿನಿಟಿ ಇದರ ಸಾಧ್ಯಾಸಾಧ್ಯತೆಗಳ; ಮೈಲೇಜು ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಡಿವಿಜನ್ನುಗಳನ್ನು ಮಾಡುತ್ತೇವೆ.

ಶ್ರೀ ಎ. ಎಂ. ದೇವ್.—ಬೆಂಗಳೂರು ಡಿವಿಜನ್ನಿನ ಆದಾಯ ಈ ಮೂರು ವರ್ಷಗಳಲ್ಲಿ ಕಡಮೆಯಾಗುತ್ತಿರುವುದಕ್ಕೆ ಕಾರಣವೇನು?

ಶ್ರೀ ಡಿ. ದೇವರಾಜ ಅರಸ್.—ಅದಕ್ಕೆ ಕಾರಣವೇನೆಂಬುದನ್ನು ಇದೇ ಸಭೆಯಲ್ಲಿ ಅನೇಕಾವರ್ತಿ ಹೇಳಿದ್ದೇನೆ. ಈಗ ಅದು ಉತ್ತಮಗೊಳ್ಳುತ್ತಿದೆ. ಒಂದೇ ರೂಟಿನಲ್ಲಿ ಮನಾಪಲಿ ಗಾಡಿಗಳೂ ಖಾಸಗಿಯವರ ಗಾಡಿಗಳು ಓಡುವುದರಿಂದ ಲುಕ್ಸಾನಿಗೆ ಇದೂ ಒಂದು ಕಾರಣ.

Sri C. J. MUCKANNAPPA.—Will the Government state the number of buses plying in all these eight divisions and the mileage covered by those buses in each division ?

Sri D. DEVARAJ URS.—Notice, Sir.

ಶ್ರೀ ಇ. ನಾರಾಯಣಗೌಡ.—ನಮ್ಮ ರಾಜ್ಯದಲ್ಲಿ ಎಲ್ಲಾ ರೂಟುಗಳನ್ನೂ ನ್ಯಾಷನಲೈಜ್ ಮಾಡಬೇಕೆಂಬ ಯೋಜನೆ ಸರ್ಕಾರಕ್ಕಿದೆಯೇ ? ಇದ್ದರೆ ಯಾವಾಗ ಮಾಡುತ್ತಾರೆ ?

ಶ್ರೀ ಡಿ. ದೇವರಾಜ ಅರಸ್.—ಈ ಉಪಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಇ. ನಾರಾಯಣ ಗೌಡ.—ಸರ್ಕಾರಿ ಬಸ್ಸುಗಳನ್ನೂ ಖಾಸಗಿಯವರ ಬಸ್ಸುಗಳನ್ನೂ ಒಟ್ಟಿಗೇ ಓಡಿಸುತ್ತಿರುವುದರಿಂದ ಲುಕ್ಸಾನಾಗುತ್ತಿದೆಂಬುದು ಸರ್ಕಾರಕ್ಕೆ ಗೊತ್ತಿದೆಯೇ ?

ಶ್ರೀ ಡಿ. ದೇವರಾಜ ಅರಸ್.—ಅದಕ್ಕಾಗಲೇ ಉತ್ತರ ಹೇಳಿದ್ದೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬೆಂಗಳೂರು ಡಿವಿಜನ್ನಿನ ಉತ್ಪತ್ತಿ ತಗ್ಗಲು ಕಾರಣ ಏನು ?

Mr. SPEAKER.—The Hon'ble Member must have been inattentive all the while. That was the one point covered by three or four supplementaries.

Sri G. V. GOWDA.—May I know whether any new routes have been taken over and if so, how many from 60-61 onwards ?

Sri D. DEVARAJ URS.—Notice.

ಶ್ರೀ ಟಿ. ಮಾದಯ್ಯ ಗೌಡ.—ಬೆಂಗಳೂರು ಡಿವಿಜನ್ನಿಗೆ ಸೇರಿದ್ದ ಕೆಲವು ಬಸ್ಸುಗಳನ್ನು ಈಗ ಮೈಸೂರು ಜಿಲ್ಲೆಯಲ್ಲಿ ಓಡಿಸುತ್ತಿರುವುದರಿಂದ ಲುಕ್ಸಾನಾಗುತ್ತಿದೆಯೆಂಬುದನ್ನು ಸರ್ಕಾರ ಮನಗಂಡಿದೆಯೇ ?

Sri D. DEVARAJ URS.—It is not correct.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬೆಂಗಳೂರು ಡಿವಿಜನ್ನಿನಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಹೊಸ ರಸ್ತೆಯನ್ನು ನ್ಯಾಷನಲೈಜ್ ಮಾಡಲಾಯಿತು ?

ಶ್ರೀ ಡಿ. ದೇವರಾಜ ಅರಸ್.—ಆ ಮಾಹಿತಿ ಈಗ ನನ್ನಲ್ಲಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಈಗ ಸರಾಸರಿ ಮೈಲೇಜ್ ಜಾಸ್ತಿಯಾಗಿದೆಯೋ ಅಥವಾ ಕಡಮೆಯಾಗಿದೆಯೋ ?

ಶ್ರೀ ಡಿ. ದೇವರಾಜ ಅರಸ್.—ಜಾಸ್ತಿಯಾಗಿದೆ.

ಶ್ರೀ ಎ. ಎಂ. ದೇವ್.—ಇತ್ತೀಚೆಗೆ ಎಷ್ಟು ಜನ ಖಾಸಗಿಯವರಿಗೆ ಹೊಸದಾಗಿ ಪರ್ಮಿಟ್‌ಗಳನ್ನು ಕೊಡಲಾಗಿದೆ ?

ಶ್ರೀ ಡಿ. ದೇವರಾಜ ಅರಸ್.—ನಾವು ಹೊಸದಾಗಿ ಯಾರಿಗೂ ಪರ್ಮಿಟ್ಟುಗಳನ್ನು ಕೊಟ್ಟಿಲ್ಲ.

ಶ್ರೀ ಬಿ. ಎಲ್. ಗೌಡ.—ಶಿವಮೊಗ್ಗ-ಚಿತ್ರದುರ್ಗ ಲೈನನ್ನು ಸರ್ಕಾರದವರಿನ್ನೂ ಏಕೆ ನ್ಯಾಷನಲೈಜ್ ಮಾಡಿಲ್ಲ ?

ಶ್ರೀ ಡಿ. ದೇವರಾಜ ಅರಸ್.—ಈಗ ಅದನ್ನೂ ನೋಡಿಕೆ ಮಾಡಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಜನರಿಗೆ ಈಗ ಈ ವ್ಯವಸ್ಥೆಯಿಂದ ಅನುಕೂಲ ಜಾಸ್ತಿಯಾಗಿದೆಯೋ, ಕಡಮೆಯಾಗಿದೆಯೋ ?

ಶ್ರೀ ಡಿ. ದೇವರಾಜ ಅರಸ್.—ಜಾಸ್ತಿಯಾಗಿದೆ.

ಶ್ರೀ ಗಂಗಾಧರ ನಾಪೋಷಿ.—ಈಗ ಈ ಬಸ್ ರೂಟ್‌ಗಳನ್ನು ಯಾವಾಗ ನಂಪೂರ್ಣವಾಗಿ ಮನಾಪಲೈಜ್ ಮಾಡಿಕೊಳ್ಳುತ್ತೀರಿ? ಖಾಸಗೀ ಬಸ್ಸುಗಳನ್ನು ಯಾವಾಗ ನಂಪೂರ್ಣವಾಗಿ ಸೆಲ್ಲನುತ್ತೀರಿ?

Mr. SPEAKER.—How does it arise as a supplementary? In a Debate it may not be irrelevant, but supplementaries must be confined to the points raised in the main question.

ಶ್ರೀ ಗಂಗಾಧರ ನಾಪೋಷಿ.—ಕೀಗಾದರೆ ನಮ್ಮ ರೆವೆನ್ಯೂ ಯಾವಾಗ ಜಾಸ್ತಿಯಾಗುವುದು?

ಶ್ರೀ ಡಿ. ದೇವರಾಜ ಅರಸ್.—ನಾಲ್ಕನೇ ಪಂಚವಾರ್ಷಿಕ ಯೋಜನೆಯ ಅಂತ್ಯದೊಳಗೆ ಎಲ್ಲಾ ರೂಟುಗಳನ್ನೂ ನಂಪೂರ್ಣವಾಗಿ ಮನಾಪಲೈಜ್ ಮಾಡುತ್ತೇವೆ. ಆ ಅಭಿಪ್ರಾಯವಿದೆ.

Weaving Co-operative Societies in Mandya District

*Q.—45. Sri N. NANJE GOWDA (Krishnarajpet).—

Will the Government be pleased to state:—

(*a*) the number and names of Weaving Co-operative Societies in Mandya District together with the names of places where they are situated (Talukwise infomation may be furnished);

(*b*) the number of members and the amount of share capital of each of the above Societies;

(*c*) the amount invested by them in each of the above Societies by way of cash or kind;

(*d*) the number of powerlooms provided to those Societies together with the cost thereof;

(*e*) the number of looms that are working at present?

A.—Sri KONDAJJI BASAPPA (Deputy Minister for Co-operation).—

(*a*), (*b*) and (*c*) *Vide* statement given below.

(*d*) 125. Cost—Rs. 3,22,500.

(*e*) 44.